ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 4, Jan-Feb 2020, 26-33
©*IIMRD*, Mysuru

IIMRD JOURNALS

www.iimrd.com

# ಭಾರತ ಸಂವಿಧಾನ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳು: ಒಂದು ವಿಮರ್ಶೆ

**ಆಯಿಷಾ ಜಮಾಲ್**[1]

**ಪೀಠಿಕೆ**

ಯಾವುದೇ ಒಂದು ರಾಷ್ಟ್ರದಲ್ಲಿನ ಜನರನ್ನು ಧರ್ಮ, ಲಿಂಗ, ಜಾತಿ ಅಥವಾ ಇತರ ಅಂಶಗಳ ಆಧಾರದ ಮೇಲೆ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಎಂದು ವಿಂಗಡಿಸಬಹುದು. ಹೆಸರೆ ಸೂಚಿಸುವಂತೆ ಸಂಖ್ಯೆಯಲ್ಲಿ ಕಡಿಮೆಯಿರುವಂತಹ ಸಮುದಾಯದವನ್ನು ಅಲ್ಪಸಂಖ್ಯಾತರು ಎಂದು ಕರೆಯಬಹುದು. "ಒಂದು ಸಮಾಜವು ಹೊಂದಿರುವ ಜನಸಂಖ್ಯೆಯಲ್ಲಿ ಕಡಿಮೆ ಸಂಖ್ಯೆಯನ್ನು ಪ್ರತಿನಿಧಿಸುವ ಒಂದು ನಿರ್ಧಿಷ್ಠ ಗುಂಪಾಗಿದ್ದು, ಸಾಂಖಿಕ್ಯವಾಗಿ ಕಡಿಮೆ ಪ್ರಮಾಣದಲ್ಲಿರುವ ಸಮುದಾಯವನ್ನು ಅಲ್ಪಸಂಖ್ಯಾತ ಗುಂಪು ಎನ್ನಬಹುದಾಗಿದೆ" ಎಂದು ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ ಉಲ್ಲೇಖಿಸಲಾಗಿದೆ.

ಭಾರತವು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಭಾಷೆ, ವೇಷಭೂಷಣ ಮುಂತಾದ ಅಂಶಗಳಲ್ಲಿ ವಿವಿಧತೆಯನ್ನು ಹೊಂದಿರುವ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಹಿಂದು, ಇಸ್ಲಾಂ(ಮುಸ್ಲಿಂ), ಕ್ರಿಶ್ಚಿಯನ್, ಜೈನ್, ಬೌದ್ಧ, ಪಾರ್ಸಿ, ಸಿಖ್ಖ್ ಧರ್ಮದವರ ನೆಲವೀಡಾಗಿರುವ ಭಾರತದಲ್ಲಿ ಹಿಂದು ಧರ್ಮ ಬಹುಸಂಖ್ಯಾತ ಧರ್ಮವಾಗಿದ್ದು, ಇನ್ನುಳಿದವು ಅಲ್ಪಸಂಖ್ಯಾತ ಧರ್ಮಗಳಾಗಿವೆ. ಭಾರತೀಯ ಸಮಾಜದಲ್ಲಿ ಎಲ್ಲರೂ ಸಾಮರಸ್ಯದಿಂದ ಜೀವನ ನಡೆಸಿತ್ತಿದ್ದರೂ ಕೂಡ ಧರ್ಮ–ಧರ್ಮಗಳ ನಡುವೆ ಆಂತರಿಕ ಕಲಹ, ಭಿನ್ನತೆ ಉಂಟಾಗುವುದು ಸಾಮಾನ್ಯ. ಈ ಹಿನ್ನಲೆಯಲ್ಲಿ ಎಲ್ಲರು ಕೂಡ ಸಮಾನರು ಎಂಬ ಆಶಯದ ಮೇಲೆ ಭಾರತೀಯ ಸಂವಿಧಾನದಲ್ಲಿ ಶೋಷಿತರಿಗೆ, ಆರ್ಥಿಕವಾಗಿ ಹಿಂದುಳಿದವರಿಗೆ, ಮಹಿಳೆ ಮತ್ತು ಮಕ್ಕಳಿಗೆ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ವಿಶೇಷವಾದ ಕಾನೂನನ್ನು ರೂಪಿಸಿ ವಿವಿಧ ಹಕ್ಕುಗಳನ್ನು ನೀಡಿ ಸಮ ಸಮಾಜದ ನಿರ್ಮಾಣಕ್ಕೆ ಅಡಿಪಾಯ ಹಾಕಲಾಗಿದೆ. ಪ್ರಸ್ತುತ ಲೇಖನದಲ್ಲಿ ಸಾಂವಿಧಾನಾತ್ಮಕವಾಗಿ ಅಲ್ಪಸಂಖ್ಯಾತರಿಗೆ ನೀಡಲಾಗಿರುವ ಹಕ್ಕುಗಳು ಮತ್ತು ಸೌಕರ್ಯಗಳನ್ನು ವಿಶ್ಲೇಷಿಸಲಾಗಿದೆ.

ವಿಲಿಯಂ ಜೆ. ಡ್ಯುಕೆಶ್‌ರವರುನ "ಭಾರತವು ವೈವಿಧ್ಯಮಯವಾದ ದೇಶವಾಗಿದ್ದು, ವಿವಿಧ ಭಾಷೆ ಸಂಸ್ಕೃತಿಗಳ ಜೊತೆಗೆ ವಿವಿಧ ಧರ್ಮಗಳನ್ನು ದೇಶದ ವಿವಿಧ ಭಾಗಗಳಲ್ಲಿ ಹೊಂದಿರುವಂತಹ ದೇಶವಾಗಿದೆ" ಎಂಬುದಾಗಿ ಹೇಳಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಷ್ಟ್ರದ ಪ್ರತಿಯೊಬ್ಬ ನಾಗರಿಕನೂ ಕೂಡ ಅವರದೇ ಆದ ರೀತಿಯಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆಯ ಮುಖಾಂತರ ರಾಷ್ಟ್ರವನ್ನು ಕಟ್ಟುವಲ್ಲಿ

---

[1] *ಸಂಶೋಧನಾ ವಿದ್ಯಾರ್ಥಿನಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ) ಮಂಡ್ಯ.*

ಹಾಗು ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ ಎನ್ನಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯೆಂಬುದೊಂದು ರಾಜಕೀಯ ವ್ಯವಸ್ಥೆಯಾಗಿದ್ದು ಇದರ ಆಧಾರಸ್ಥಂಭಗಳಾಗಿ ಸಾಮಾಜಿಕ ನ್ಯಾಯ ಸ್ವಾತಂತ್ರ್ಯ, ಸಮಾನತೆ, ಕಾನೂನಿನ ಆಡಳಿತ, ಸಾರ್ವಜನಿಕ ಆಡಳಿತವನ್ನು ಗುರುತಿಸಬಹುದು.

ಹಾಗಾಗಿಯೇ ಬಹುಮಂದಿ ಪಾಶ್ಚಾತ್ಯ ಚಿಂತಕರು ಪ್ರಜಾಪ್ರಭುತ್ವವನ್ನು ಬಹುಜನಪ್ರಿಯ ಸರ್ಕಾರದ ವಿಧವಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಉದಾಹರಣೆಯಾಗಿ ತೆಗೆದುಕೊಂಡರೆ ಲ್ಯಾರಿ ಡೈಯಮಂಡ್ ಮತ್ತು ಗೀವುಕ್‌ರಿನ್ ರವರ ತಮ್ಮ ಸಂಪಾದಿತ ಪುಸ್ತಕದಲ್ಲಿ "ಪ್ರಜಾಪ್ರಭುತ್ವವು ಒಂದು ಉತ್ತಮ ಸರ್ಕಾರವಾಗಿದ್ದು ಹಾಗು ಬಹಳ ಆದ್ಯತೆಗೊಳಪಟ್ಟ ರಾಜಕೀಯ ವ್ಯವಸ್ಥೆಯಾಗಿದೆ" ಎಂಬುದಾಗಿ ತಿಳಿಸಿದ್ದಾರೆ. ಆದರೆ ಪ್ರಜಾಪ್ರಭುತ್ವವೇ ಅಂತಿಮವಾದ ವ್ಯವಸ್ಥೆಯಾಗಿಲ್ಲ ಏಕೆಂದರೆ ಇದರ ಬಗ್ಗೆ ವಿವಿಧ ಅಭಿಪ್ರಾಯಗಳೂ ಹೊರಬಂದಿದ್ದು, ಪ್ರಜಾಪ್ರಭುತ್ವ ಸಕಾರಾತ್ಮಕ ಅಂಶಗಳನ್ನು ಹೊಗಳುವುದರ ಬದಲು ಅದರ ನ್ಯೂನ್ಯತೆ, ಲೋಪದೋಷಗಳು ಮತ್ತು ಪ್ರಧಾನವಾದ ವಿರೋಧಭಾಸಗಳ ಕಡೆಗೂ ಕೂಡ ಗಮನಹರಿಸಬೇಕಾಗಿದೆ ಎಂದು ಹೇಳಬಹುದಾಗಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆಯೇ ವಿನ್ಸ್‌ಟನ್ ಚರ್ಚಿಲ್‌ರವರ ಮಾತುಗಳಾದ "ಪ್ರಜಾಪ್ರಭುತ್ವ ವ್ಯವಸ್ಥೆಯು ಇದುವರೆಗಿನ ಕಾಲದಿಂದ ಕಾಲಕ್ಕೆ ಅನುಭವಿಸಿದ ಹಾಗು ಇತರೆ ಸರ್ಕಾರದ ವ್ಯವಸ್ಥೆಗಳಿಗಿಂತ ಅತ್ಯಂತ ಕೆಟ್ಟದಾದ ಸರ್ಕಾರದ ವ್ಯವಸ್ಥೆಯಾಗಿದೆ ಎಂಬುದಾಗಿ ತಿಳಿಸಿದ್ದಾರೆ ಹಾಗೆಯೇ ಜೆ.ಎಸ್. ಮಿಲ್‌ರವರು ಪ್ರಜಾಪ್ರಭುತ್ವವು "ದಬ್ಬಾಳಿಕೆಯಿಂದ ಕೂಡಿದ ಬಹುಸಂಖ್ಯಾತರ ಆಳ್ವಿಕೆ" ಎಂಬುದಾಗಿ ತಿಳಿಸಿದ್ದಾರೆ ಹಾಗಾಗಿ ಯಾವುದೇ ಒಂದು ರಾಜಕೀಯ ವ್ಯವಸ್ಥೆಯ ಕುರಿತಾಗಿ ಕಂಡುಬರುವಂತಹ ಗುಣಾವಗುಣಗಳ ಬಗ್ಗೆ ಈ ಮೇಲಿನಂತೆ ತಿಳಿಯಬಹುದಾಗಿದೆ.

ಪ್ರಜಾಪ್ರಭುತ್ವ ಸರ್ಕಾರವನ್ನು ಒಂದು ರಾಜಕೀಯ ವ್ಯವಸ್ಥೆಯಾಗಿ ಅಳವಡಿಸಿಕೊಳ್ಳಲು ಬಹುಸಂಖ್ಯೆಯನ್ನು ಮಾನದಂಡವನ್ನಾಗಿ ಬಳಸಲಾಗುತ್ತದೆ. ಈ ವಿಚಾರವು ಕೆಲವೊಂದು ವಿಚಾರವಾದಿಗಳಿಗೆ ತಾರ್ಕಿಕ ಹಾಗು ಬುದ್ದಿಜೀವಿಗೆ ಒಂದು ರೀತಿಯಾದ ಪ್ರಶ್ನಾರ್ಥಕವಾದ ವಿಚಾರವಾಗಿದೆ. ಅದೇನೆಂದರೆ ಆಡಳಿತ ಪಕ್ಷದ ಪರವಾಗಿ ಮತಹಾಕದಿರುವ ಹಾಗು ಪರವಾಗಿ ಆಡಳಿತ ಪಕ್ಷಕ್ಕೆ ಸೇರಿದ ಧರ್ಮದವರ ಹಿನ್ನಲೆ ಹೊಂದಿದವರ ಮತ್ತು ಬಹುಮತ ಪಡೆದ ಸಮಾಜದ ವಿಚಾರಗಳಲ್ಲಿನ ವಿವಾದಗಳು ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆ ಮತ್ತು ದೌರ್ಜನ್ಯಗಳಿಗೆ ಕಾರಣವಾಗುತ್ತವೆ ಎಂಬುದಾಗಿ ಹೇಳಬಹುದು.

**ಭಾರತದಲ್ಲಿ ಅಲ್ಪಸಂಖ್ಯಾತರು ಮತ್ತು ಬಹುಸಂಸ್ಕೃತಿ**

ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರ ನಡುವಿನ ಅಂತರ, ಭಿನ್ನತೆ, ವ್ಯತ್ಯಾಸಗಳು ಮುಂದುವರೆದ ಮತ್ತು ಮುಂಚೂಣಿಯಲ್ಲಿರುವ ರಾಷ್ಟ್ರಗಳಲ್ಲಿಯೂ ಸಹಜ ಮತ್ತು ಸಾಮಾನ್ಯವಾದ ವಿಷಯವಾಗಿದೆ. ಈ ವಿಚಾರವು ಪ್ರಪಂಚದಾದ್ಯಂತ ಕಂಡುಬಂದಿದ್ದು ಅಲ್ಪಸಂಖ್ಯಾತರು ಎದುರಿಸುತ್ತಿರುವ ತೊಂದರೆಗಳು ಮತ್ತು ಸಾಮೂಹಿಕವಾಗಿ ನಡೆಯುತ್ತಿರುವ ಮಾನವಹಕ್ಕುಗಳ ಉಲ್ಲಂಘನೆಯ ಕುರಿತು ದೃಷ್ಟಿಯನ್ನು ಬೀರುತ್ತಿದ್ದು, ವಿಶ್ವದಲ್ಲಿಯೇ ಚರ್ಚಿತಗೊಂಡಿರುವ ಪ್ರಧಾನವಾದಂತಹ ವಿಚಾರವಾಗಿದೆ. ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತರ ಸಂಸ್ಕೃತಿಯನ್ನು ತಿಳಿಸುವಂತಹ ರಾಜಕೀಯ ವಿಚಾರದ ಕುರಿತಾಗಿ

ಹೆಚ್ಚಿನದಾದಂತಹ ಗಮನವನ್ನುಹರಿಸುತ್ತದೆ ಹಾಗಾಗಿ ಈ ಮೇಲ್ಕಂಡಂತಹ ಚರ್ಚೆಯು ಬಹುಸಂಸ್ಕೃತಿ ಎನ್ನುವ ಪರಿಕಲ್ಪನೆಗೆ ಪ್ರಜಾಪ್ರಭುತ್ವ ಸಿದ್ಧಾಂತದಲ್ಲಿ ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ತಳಹದಿಯನ್ನು ಹಾಕಿಕೊಡುತ್ತದೆ. ಬಹುಸಂಸ್ಕೃತಿಯ ಕುರಿತಾಗಿ ಪಂಡಿತರು, ವಿದ್ವಾಂಸರುಗಳು ಆಳವಾಗಿ ಮತ್ತು ವಿಶಾಲವಾಗಿ ಚರ್ಚೆಗಳನ್ನು ನಡೆಸಿದ್ದು, ಇವರ ಅಭಿಪ್ರಾಯ ಸಮಾಜದಲ್ಲಿ ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತರ ಅಸ್ತಿತ್ವದ ಕರಿತು ಮತ್ತು ಇವರಿಗೆ ಪ್ರಧಾನವಾಗಿ ನೀಡಲಾಗಿರುವ ಹಕ್ಕುಗಳು, ಸವಲತ್ತುಗಳು ಮತ್ತು ರಿಯಾಯಿತಿಗಳು ಹಾಗು ಅವರ ಸಂರಕ್ಷಣೆಗಳ ವಿಚಾರಗಳನ್ನು ಅವರ ನಡುವೆ ಇರುವ ಧರ್ಮ, ಜಾತಿ, ಭಾಷೆ ಸಂಸ್ಕೃತಿ ಇವುಗಳ ಆಧಾರದ ಮೇಲೆ ಬಹುಸಂಸ್ಕೃತಿಯನ್ನು ಅಳೆಯಬಹುದು ಎಂಬುದಾಗಿದೆ.

ಅಲ್ಪಸಂಖ್ಯಾತರು ಮತ್ತು ಪ್ರಜಾಪ್ರಭುತ್ವ ಎನ್ನುವಂತಹ ವಿಚಾರಗಳು ಒಂದಕ್ಕೊಂದು ಪೂರಕವಾದಂತಹ ವಿಷಯಗಳಾಗಿವೆ. ಅಲ್ಪಸಂಖ್ಯಾತರಿಲ್ಲದೇ ಪ್ರಜಾಪ್ರಭುತ್ವವನ್ನು ಹೊಂದಲು ಸಾಧ್ಯವಿಲ್ಲ ಹಾಗಾಗಿ ಭಾರತದಂತಹ ವಿವಿಧತೆಯನ್ನು ಹೊಂದಿರುವ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗಿರುವುದು, ಅದು ತನ್ನ ದೇಶದ ಅಲ್ಪಸಂಖ್ಯಾತರಿಗೆ ಆಶ್ರಯ ನೀಡಿ ರಕ್ಷಿಸಿ, ಪೋಷಿಸಿ ಅವರಿಗೆ ಗರಿಷ್ಠವಾದ ಸ್ವಾತಂತ್ರ್ಯವನ್ನು ನೀಡಿರುವುದ್ದರಿಂದ ಎಂಬುದಾಗಿ ಹೇಳಬಹುದು. ಆದರೂ ಇತ್ತೀಚಿನ ಕಾಲಮಾನದಲ್ಲಿ ಅಲ್ಪಸಂಖ್ಯಾತರು ಬಹುಸಂಖ್ಯಾತರ ಪ್ರಾಬಲ್ಯದಿಂದಾಗಿ ಅಭದ್ರತೆಯ ಸ್ಥಿತಿಯಲ್ಲಿ ಬದುಕುತ್ತಿರುವುದು ಸಹಜ ಮತ್ತು ಸಾಮಾನ್ಯವಾಗಿದೆ. ಪ್ರಜಾಪ್ರಭುತ್ವವು ತನ್ನ ನಾಗರಿಕರಿಗೆ ನೀಡಿರುವ ಹಕ್ಕು ಮತ್ತು ಸ್ವಾತಂತ್ರ್ಯವು ಬೇರೆ ಯಾವುದೇ ವಿಷಯಕ್ಕಿಂತಲೂ ಮೌಲ್ಯಯುತವಾಗಿದೆ ಎನ್ನಬಹುದು. ಹಾಗೆಯೇ ಪ್ರಜಾಪ್ರಭುತ್ವವು ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯದ ತಳಹದಿಯ ಮೇಲೆ ನಿಂತಿರುವುದರಿಂದ ಇವುಗಳು ವೈಯಕ್ತಿಕ ಹಾಗು ಗುಂಪುಗಳ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಪಡೆಯುವ, ಇವುಗಳ ನಡುವೆ ಸಮತೋಲನವನ್ನು ಕಾಪಾಡುವಲ್ಲಿ ಪೂರಕವಾದಂತಹ ಕರ್ತವ್ಯವನ್ನು ನಿರ್ವಹಿಸುತ್ತದೆ.

**ಭಾರತದಲ್ಲಿ ಅಲ್ಪಸಂಖ್ಯಾತರು**

ಭಾರತದೇಶವು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಜನಾಂಗೀಯವಾಗಿ, ಧಾರ್ಮಿಕವಾಗಿ ವೈವಿಧ್ಯತೆಯನ್ನು ಹೊಂದಿರುವಂತಹ ರಾಷ್ಟ್ರವಾಗಿದೆ. ಸಾಂಪ್ರದಾಯಿಕ ಜಾತಿ ವ್ಯವಸ್ಥೆಯಡಿಯಲ್ಲಿ ಭಾರತದಲ್ಲಿ ಸಾವಿರಾರು ಜಾತಿ–ಉಪಜಾತಿಗಳು ಕಂಡುಬಂದಿದ್ದು, ಇವರೇ ಸಮಾಜದ ಹಾಗು ರಾಜಕೀಯ ವ್ಯವಸ್ಥೆಯ ಪ್ರಮುಖ ನಿರ್ಧಾರಕರು ಎಂಬುದಾಗಿ ಹೇಳಬಹುದು. ಸಾಂವಿಧಾನಿಕವಾಗಿ 22 ಭಾಷೆಗಳನ್ನು ಅಧಿಕೃತಗೊಳಿಸಲಾಗಿದ್ದರೂ ಕೂಡ 1500ಕ್ಕಿಂತಲೂ ಹೆಚ್ಚು ಮಾತೃಭಾಷೆಗಳ ಅಸ್ತಿತ್ವವನ್ನು ಕಾಣಬಹುದಾಗಿದೆ. ಅದರಲ್ಲಿ 33 ಮಾತೃಭಾಷೆಗಳನ್ನು ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿ ಬಳಸುವಂತಹ ಜನರಿರುವುದನ್ನು ಗುರ್ತಿಸಬಹುದಾಗಿದೆ. ಇಲ್ಲಿ 4635 ಸಮುದಾಯವವರನ್ನು ಗುರ್ತಿಸಲಾಗಿದ್ದು, ಇವರುಗಳು ಜೈವಿಕ ಲಕ್ಷಣಗಳಲ್ಲಿ ಭಾಷೆಗಳಲ್ಲಿ ಆಧ್ಯಾತ್ಮಿಕತೆಯಲ್ಲಿ, ಹವ್ಯಾಸಗಳಲ್ಲಿ ಆಹಾರದ ವಿಧಾನಗಳಲ್ಲಿ ಮತ್ತು ಬಂಧುತ್ವದ ವಿಧಗಳಲ್ಲಿ ವಿಭಿನ್ನತೆಗಳನ್ನು ಹೊಂದಿರುವಂತಹದ್ದನ್ನು

ಕಾಣಬಹುದಾಗಿದೆ. ಈ ಬಗೆಯ ವಿಭಿನ್ನತೆಗಳನ್ನು ಹೊಂದಿರುವಂತಹ ಭಾರತದಲ್ಲಿ ಭಿನ್ನಾಭಿಪ್ರಾಯಗಳು ಸಂಘರ್ಷಗಳು ಸಾಮಾನ್ಯವಾಗಿದ್ದು, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇದೊಂದು ದೊಡ್ಡ ಸವಾಲಾಗಿದೆ.

**ಭಾರತ ಸಂವಿಧಾನ ಮತ್ತು ಅಲ್ಪಸಂಖ್ಯಾತರು**

ನಮ್ಮ ಸಂವಿಧಾನದ ಪ್ರಸ್ತಾವನೆಯಿಂದಲೇ ಭಾರತವು ಧರ್ಮನಿರಪೇಕ್ಷ ಅಥವಾ ಜಾತ್ಯಾತೀತ ರಾಷ್ಟ್ರವೆನ್ನುವುದನ್ನು ಮನಗಾಣಬಹುದಾಗಿದೆ. ಭಾರತ ಸಂವಿಧಾನವು 1950ರಲ್ಲಿ ರಚನೆಯಾದಾಗ ಮೂಲ ಸಂವಿಧಾನದಲ್ಲಿ ಜಾತ್ಯಾತೀತ ಎನ್ನುವ ಪದವು ಇರಲಿಲ್ಲ ಹಾಗಾಗಿ ಈ ಪದವನ್ನು 1976 ರಲ್ಲಿ 42ನೇ ತಿದ್ದುಪಡಿಯ ಮೂಲಕ ಧರ್ಮನಿರಪೇಕ್ಷ ರಾಷ್ಟ್ರ ಎಂಬುದಾಗಿ ಸೇರಿಸಲಾಯಿತು. ಮೂಲ ಸಂವಿಧಾನದಲ್ಲಿ ಜಾತ್ಯತೀತ ವಿಚಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಸ್ಪಷ್ಟವಾಗಿ ವಿಧಿ 25 ರಿಂದ 28 ದವರೆಗೆ ವಿವರಿಸಲಾಗಿತ್ತು. ಹಾಗಾಗಿ ಪ್ರತಿಯೊಂದು ಧರ್ಮವೂ ಕೂಡ ಭಾರತ ರಾಷ್ಟ್ರದಲ್ಲಿ ಸಮಾನವಾದ ಸ್ಥಾನಮಾನವನ್ನು ಹೊಂದಿದೆ ಎನ್ನಬಹುದು. ಹಾಗಾಗಿಯೇ ಭಾರತದಂತಹ ವಿಶಿಷ್ಟವಾದ ಹಾಗು ವಿವಿಧತೆಯನ್ನು ಹೊಂದಿರುವ ರಾಷ್ಟ್ರದಲ್ಲಿ ಧರ್ಮಾತೀತ ಎನ್ನುವ ಪರಿಕಲ್ಪನೆಯು ಸರ್ವಧರ್ಮ ಸಂಭವ ಎನ್ನುವಂತಹ ವಿಚಾರಕ್ಕೆ ಸಾಮ್ಯತೆಯನ್ನು ಹೊಂದಿದೆ ಎನ್ನಬಹುದಾಗಿದೆ.

ಭಾರತದ ಸಂವಿಧಾನದ ಮೂರನೇ ಭಾಗವನ್ನು ಸಂವಿಧಾನದ ಹೃದಯಭಾಗ ಎಂಬುದಾಗಿಯೇ ಹೇಳಲಾಗಿದೆ. ಈ ಭಾಗದಲ್ಲಿ 12 ರಿಂದ 35ನೇ ವಿಧಿಯವರೆಗೆ ಮೂಲಭೂತ ಹಕ್ಕುಗಳ ಕುರಿತಾಗಿ ವಿವರಣೆಯನ್ನು ನೀಡಲಾಗಿದೆ. ಮೂಲಭೂತ ಹಕ್ಕುಗಳನ್ನು ಅಮೆರಿಕಾ ಸಂವಿಧಾನದಿಂದ ಎರವಲು ಪಡೆಯುವ ಮೂಲಕ ನಮ್ಮ ರಾಷ್ಟ್ರಕ್ಕೆ ವಿವರಣಾತ್ಮಕ ಮತ್ತು ನ್ಯಾಯಯುತವಾದ ಮೂಲಭೂತ ಹಕ್ಕುಗಳನ್ನಾಗಿ ಒದಲಾಗಿಸಲಾಗಿದೆ. ಹಾಗಾಗಿ ಮೂಲಭೂತ ಹಕ್ಕುಗಳ ಮೂಲಕ ಭಾರತದ ಪ್ರತಿಯೊಬ್ಬ ನಾಗರಿಕನೂ ಯಾವುದೇ ಭೇದಭಾವವಿಲ್ಲದೇ ಸಮಾನಾವಕಾಶಗಳನ್ನು ಅನುಭವಿಸುವ ಭರವಸೆಯನ್ನು ನೀಡಲಾಗಿದೆ. ಮೂಲಭೂತ ಹಕ್ಕುಗಳ ಮೂಲಕ ವೈಯಕ್ತಿಕ ಸ್ವಾತಂತ್ರ್ಯ, ಸಾಮಾಜಿಕ, ಸಾರ್ವಜನಿಕ ಹಿತಾಸಕ್ತಿ, ರಾಷ್ಟ್ರೀಯ ಏಕತೆಯ ರಕ್ಷಣೆಯನ್ನು ಪಡೆಯಬಹುದಾಗಿದೆ. ಹಾಗಾಗಿ ಸಂವಿಧಾನ ರಚನೆಯದಾಗಿರುವ ಹಕ್ಕುಗಳು ಸಂವಿಧಾನದ ಮೂಲಕ ನೀಡಲಾಗಿದೆ ಮತ್ತು ಸುರಕ್ಷಿತಗೊಂಡಿದೆ ಹಾಗು ಸಂವಿಧಾನವನ್ನು ರಾಷ್ಟ್ರದ ಸರ್ವೋಚ್ಚ ಕಾನೂನು ಎಂಬುದಾಗಿ ಹೇಳಬಹುದಾಗಿದೆ. ಹಾಗಾಗಿ ಸಂವಿಧಾನದ ಮೂಲಕ ಸುರಕ್ಷಿತಗೊಂಡಿರುವ ಮೂಲಭೂತ ಹಕ್ಕುಗಳು ಮತ್ತು ಸವಲತ್ತುಗಳನ್ನು ಕುರಿತು ಈ ಮುಂದಿನಂತೆ ತಿಳಿಯಬಹುದಾಗಿದೆ.

ಸಂವಿಧಾನದ 14ನೇ ವಿಧಿಯು ಕಾನೂನಿನ ಸಮಾನತೆಯನ್ನು ಮತ್ತು ಕಾನೂನಿನ ಸಮಾನ ರಕ್ಷಣೆಯನ್ನು ರಾಜ್ಯವು ಯಾವ ವ್ಯಕ್ತಿಗೂ ನಿರಾಕರಿಸುವಂತಿಲ್ಲ ಹಾಗು ಕಾನೂನಿನ ಮತ್ತು ನ್ಯಾಯಾಂಗದ ಸಮ್ಮುಖದಲ್ಲಿ ಸಮಾನರು ಎಂಬುದಾಗಿ ತಿಳಿಸುತ್ತದೆ. 15ನೇ (4) ವಿಧಿಯ ಪ್ರಕಾರ ಸಾರ್ವಜನಿಕ ಅಂಗಡಿ, ಉಪಗೃಹ ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲರಿಗೂ ಪ್ರವೇಶವುಂಟು ಕೇವಲ ಧರ್ಮ, ಜಾತಿ, ಜನಾಂಗ ಇವುಗಳ ಆಧಾರದ ಮೇಲೆ ಯಾರಿಗೂ ಪ್ರವೇಶವನ್ನು ನಿರಾಕರಿಸುವಂತಿಲ್ಲ ಹಾಗೆಯೇ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ದುರ್ಬಲವರ್ಗದವರಿಗೆ ವಿಶೇಷವಾದ

ಸೌಕರ್ಯಗಳ ಬಗ್ಗೆ ತಿಳಿಸಲಾಗಿದೆ. ಹಾಗಾಗಿ ಈ ವಿಧಿಯು ಸರ್ಕಾರದ ಆಡಳಿತ ಯಂತ್ರಗಳ ಸಾಂವಿಧಾನಿಕವಾಗಿ ಬದ್ಧತೆಯನ್ನು ನೀಡುತ್ತದೆ ಜೊತೆಗೆ ದುರ್ಬಲ ವರ್ಗದವರಿಗೆ ಯಾವುದೇ ರೀತಿಯಾದ ವಿಶೇಷ ಸೌಲಭ್ಯಗಳ ರಚನೆಗೆ ಅವಕಾಶ ಮಾಡಿಕೊಡುತ್ತದೆ.

ಗೋಪಾಲ್‌ಸಿಂಗ್ ಮತ್ತು ಸಾಚಾರ್ ಸಮಿತಿಯ ವರದಿಯದಲ್ಲಿ ಮುಸ್ಲಿಂರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯ ಬಗ್ಗೆ ತಿಳಿಸಲಾಗಿದೆ. ಭಾರತದ ವಿವಿಧ ರಾಜ್ಯಗಳ ಬಗ್ಗೆ ಗಮನಹರಿಸಲಾಗಿದೆ ಹಾಗು ಕೆಲವೊಂದು ರಾಜ್ಯಗಳು ಅಲ್ಪಸಂಖ್ಯಾತರ ಮುಸ್ಲಿಂ ಸಮುದಾಯದವರಿಗೆ ವಿಶೇಷ ಸೌಕರ್ಯಗಳನ್ನು ನೀಡಿರುವುದನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ.

19ನೇ ಸಾಂವಿಧಾನಿಕ ವಿಧಿಯ ಪ್ರಕಾರ "ಎಲ್ಲಾ ನಾಗರೀಕರು ಮಾತನಾಡುವ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ, ಶಾಂತಿಯುತ ಹಾಗು ಶಸ್ತ್ರರಹಿತವಾಗಿ ಸಭೆ ಸೇರುವ ಸ್ವಾತಂತ್ರ್ಯ, ಸಂಘ ಸಂಸ್ಥೆಗಳನ್ನು ರಚಿಸುವ ಸ್ವಾತಂತ್ರ್ಯ, ಭಾರತದ ಯಾವುದೇ ಭಾಗದಲ್ಲಾದರೂ ವಾಸಿಸುವ ಮತ್ತು ನೆಲೆಯಾಗಿ ನಿಲ್ಲುವ ಸ್ವಾತಂತ್ರ್ಯ, ಯಾವುದೇ ಉದ್ಯೋಗ ವೃತ್ತಿ ಅಥವಾ ವಾಣಿಜ್ಯ ಮತ್ತು ವ್ಯಾಪಾರ ಮಾಡುವ ಸ್ವಾತಂತ್ರ್ಯವಿದೆ. ಇವು ಮಾನವ ಸಮಾಜದ ಅಭಿವೃದ್ಧಿಗೆ ಮತ್ತು ಶಾಂತಿಯುತ ಜೀವನಕ್ಕೆ ಕೇಂದ್ರಬಿಂದುವಾಗಿದ್ದು, ಸಮಾಜದ ಜೀವಾಳವಾಗಿವೆ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮತ್ತು ಪ್ರಗತಿಗೆ ಈ ಅಭಿಪ್ರಾಯ ವ್ಯಕ್ತಪಡಿಸುವ ಸಂಘ ಸಂಸ್ಥೆಗಳನ್ನು ಸ್ಥಾಪಿಸುವ ವೃತ್ತಿ ನೆಲೆಯಾಗಿ ನಿಲ್ಲುವ ಸಂಚರಿಸುವ ಸ್ವಾತಂತ್ರ್ಯಗಳು ಸರ್ವೋತ್ಕೃಷ್ಟವಾಗಿದೆ. ಇಲ್ಲದಿದ್ದರೆ ಅಲ್ಪಸಂಖ್ಯಾತರು ಸಮಾಜದ ಬಹುಸಂಖ್ಯಾತರ ದಬ್ಬಾಳಿಕೆಗೊಳಗಾಗಬೇಕಿತ್ತು ಎನ್ನಬಹುದು.

ಭಾರತ ಸಂವಿಧಾನದ 25ನೇ ವಿಧಿಯು ಪ್ರತಿಯೊಬ್ಬರಿಗೂ ತಮ್ಮ ಮನಸಾಕ್ಷಿಯಂತೆ ನಡೆಯುವ ಸ್ವಾತಂತ್ರ್ಯವನ್ನು ನೀಡಿದೆ ಮತ್ತು ಪ್ರತಿಯೊಬ್ಬ ಪ್ರಜೆಗೂ ತನಗೆ ಇಷ್ಟವಾದ ಧರ್ಮವನ್ನು ಅವಲಂಬಿಸುವ ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕನ್ನು ನೀಡುತ್ತದೆ. ಆದರೆ ಈ ಹಕ್ಕನ್ನು ಸಾರ್ವಜನಿಕ ಶಾಂತಿ ನೀತಿ ಮತ್ತು ಆರೋಗ್ಯ ಇವುಗಳಿಗೆ ಧಕ್ಕೆಯಾಗದಂತೆ ಚಲಾಯಿಸಬೇಕು ಎಂಬುದಾಗಿ ತಿಳಿಸುತ್ತದೆ ಇದು ಅಲ್ಪಸಂಖ್ಯಾತರ ದಾಳಿಯಿಂದ ರಕ್ಷಿಸುವ ರೀತಿಯಾಗಿದೆ ಎನ್ನಬಹುದು.

26ನೇ ವಿಧಿಯು ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಸ್ವಾತಂತ್ರ್ಯವನ್ನು ಕೊಡುತ್ತದೆ. ಇದರ ಪ್ರಕಾರ ಎಲ್ಲಾ ಧಾರ್ಮಿಕ ಪಂಥಗಳು ತಮ್ಮ ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಅವುಗಳ ಬೆಳವಣಿಗೆಗೆ ಬೇಕಾದ ಧನ, ಧಾನ್ಯ ಆಸ್ತಿಗಳನ್ನು ಹೊಂದುವ ಸಂಗ್ರಹಿಸುವ ಮತ್ತು ಆಸ್ತಿಯನ್ನು ನಡೆಸಿಕೊಂಡು ಬರುವ ಹಕ್ಕನ್ನು ವ್ಯವಹಾರ ಮಾಡುವುದನ್ನು ರಾಜ್ಯವು ಸಹಿಸುವುದಿಲ್ಲ.

27ನೇ ವಿಧಿಯು ಯಾವುದೇ ಧರ್ಮದ ರಕ್ಷಣೆಗಾಗಿ ಅಥವಾ ಪ್ರಚಾರಕ್ಕಾಗಿ ಧಾರ್ಮಿಕ ತೆರಿಗೆಗಳನ್ನು ನಿಷೇಧಿಸಿದೆ. ಹಾಗಾಗಿ ಈ ವಿಧಿಯು ಸರ್ಕಾರದ ಯಾವುದೇ ಒಂದು ನಿರ್ದಿಷ್ಟ ಧರ್ಮದ ಅಲ್ಪಸಂಖ್ಯಾತರನ್ನು ಒಳಗೊಂಡಂತೆ ಅಭಿವೃದ್ಧಿಗೊಳಿಸಲು ಸಾರ್ವಜನಿಕ ಹಣವನ್ನು ವ್ಯಯಮಾಡುವಂತಿಲ್ಲ ಎಂಬುದನ್ನು ಸೃಷ್ಟಿಕರಿಸುತ್ತದೆ.

ಸಂವಿದಾನದ 28ನೇ ವಿಧಿಯು ಸರ್ಕಾರದ ಧನಸಹಾಯದಿಂದ ನಡೆಸಲ್ಪಡುವ ಶಾಲಾ ಕಾಲೇಜುಗಳಲ್ಲಿ ಯಾವುದೇ ಧಾರ್ಮಿಕ ಶಿಕ್ಷಣವನ್ನು ಕೊಡುವುದನ್ನು ರಾಜ್ಯಾಂಗ ನಿಷೇಧಿಸುತ್ತದೆ. ಹಾಗಾಗಿ ಈ ವಿಧಿಯು ಬಹುಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಬ್ಯಾಸ ಮಾಡುವ ಅಲ್ಪಸಂಖ್ಯಾತರಲ್ಲಿ ಅವರ ಧರ್ಮದ ಸಂಪ್ರದಾಯಗಳನ್ನು ಬಲವಂತವಾಗಿ ಆಚರಿಸುವುದರಿಂದ ಬಚಾವು ಮಾಡುತ್ತದೆ.

ಸಂವಿಧಾನದ 29(1)ನೇ ವಿಧಿಯು ಭಾರತದ ಯಾವುದೇ ಭಾಗದಲ್ಲಿ ವಾಸಿಸುವ ಯಾವುದೇ ವರ್ಗದ ಪ್ರಜೆಗಳು ತಮ್ಮದೇ ಆದ ಭಾಷೆ, ಲಿಪಿ, ಸಂಸ್ಕೃತಿಯನ್ನು ಹೊಂದಿದ್ದರೆ ಅವುಗಳನ್ನು ಸಂರಕ್ಷಿಸಿಕೊಳ್ಳುವ ಹಾಗು ಅಭಿವೃದ್ಧಿಪಡಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತಾರೆ. 29(2)ನೇ ವಿಧಿಯು ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ನಡೆಸಲ್ಪಡುವ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಧನ ಸಹಾಯದೊಂದಿಗೆ ನಡೆಸಲ್ಪಡುವ ವಿದ್ಯಾಸಂಸ್ಥೆಗಳಲ್ಲಿ ಜಾತಿ, ಮತ, ಧರ್ಮ, ಭಾಷೆ, ಇವುಗಳ ಆಧಾರದ ಮೇಲೆ ತಾರತಮ್ಯವನ್ನು ಮಾಡುವಂತಿಲ್ಲ ಅಥವಾ ಪ್ರವೇಶ ನಿರಾಕರಿಸುವಂತಿಲ್ಲ.

ಸಂವಿಧಾನದ 30(1) ನೇ ವಿಧಿಯಲ್ಲಿ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರು ತಮ್ಮದೇ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ಅಭಿವೃದ್ಧಿಪಡಿಸುವ ಸ್ವಾತಂತ್ರ್ಯ ಹಕ್ಕನ್ನು ಹೊಂದಿರುತ್ತಾರೆ. ಸಂವಿಧಾನದ 30(2)ನೇ ವಿಧಿಯಲ್ಲಿ ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಧನಸಹಾಯ ನೀಡುವಲ್ಲಿ ಜಾತಿ, ಮತ, ಧರ್ಮ, ಭಾಷೆಗಳ  ಆಧಾರದ ಮೇಲೆ ರಾಜ್ಯ ತಾರತಮ್ಯ ತೋರಿಸುವಂತಿಲ್ಲ ಎಂಬುದಾಗಿ ತಿಳಿಸಲಾಗಿದೆ.

**ರಾಜ್ಯ ನಿರ್ದೇಶಕ ತತ್ವಗಳು**

ರಾಜ್ಯನೀತಿ ನಿರ್ದೇಶಕ ತತ್ವಗಳು ರಾಜ್ಯಗಳು ನಿರ್ವಹಿಸಬೇಕಾದ ಕಾರ್ಯನೀತಿ ಮಾರ್ಗದರ್ಶಕಗಳಂತಿದ್ದು, ಕಲ್ಯಾಣ ರಾಜ್ಯದ ಸ್ಥಾಪನಾ ಉದ್ದೇಶವನ್ನು ಹೊಂದಿದೆ ಹಾಗಾಗಿ ರಾಜ್ಯನೀತಿ ನಿರ್ದೇಶಕ ತತ್ವ 36ನೇ ವಿಧಿಯಿಂದ 51 ನೇ ವಿಧೆವರೆಗೆ ತಿಳಿಸುತ್ತದೆ. ಇವುಗಳನ್ನು ಐರಿಸ್ ಸಂವಿಧಾನದಿಂದ ಎರವಲಾಗಿ ಪಡೆದು ಅಳವಡಿಸಿಕೊಳ್ಳಲಾಗಿದೆ. ರಾಜ್ಯವೆಂಬ ಪದವನ್ನು ಬಹಳ ವಿಶಾಲ ಅರ್ಥದಲ್ಲಿ ಬಳಸಲಾಗಿದ್ದು, ಕೇಂದ್ರ, ರಾಜ್ಯ ಹಾಗು ಸ್ಥಳೀಯ ಸರ್ಕಾರಗಳು ನಿರ್ವಹಿಸಬೇಕಾದದ್ದು ಎಂದು ಪ್ರಸ್ತಾಪಿಸಿದೆ.

ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿಯಾದರೂ ಈ ರಾಜ್ಯನೀತಿ ನಿರ್ದೇಶಕ ತತ್ವಗಳ ಕೆಲವೊಂದು ವಿಧಿಗಳು ಭಾರತದ ಅಲ್ಪಸಂಖ್ಯಾತರ ಹಕ್ಕುಗಳ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಸಂವಿಧಾನದ 38ನೇ ವಿಧಿಯು ರಾಜ್ಯವು ಜನತೆಯ ಕಲ್ಯಾಣಕ್ಕಾಗಿ ಶ್ರಮಿಸಬೇಕೆಂದು ಸೂಚಿಸುತ್ತದೆ ಅಂದರೆ ಸಮಾಜದ ವಿವಿಧ ವರ್ಗಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಒದಗಿಸಿ ಅವರ ಹಕ್ಕುಗಳ ರಕ್ಷಣೆಯನ್ನು ಮಾಡಬೇಕಾಗುತ್ತದೆ ಹಾಗಾಗಿ ಇದರಲ್ಲಿ ನ್ಯಾಯವನ್ನು ಸಮಾಜದ ಅಲ್ಪಸಂಖ್ಯಾತರ ಮತ್ತು ದುರ್ಬಲವರ್ಗದವರಿಗೂ ಒದಗಿಸಿ ಅವರ ಕಲ್ಯಾಣವನ್ನು ಸಾಧಿಸಬೇಕೆಂದು ತಿಳಿಸುತ್ತದೆ.

ಸಂವಿಧಾನದ 39ನೇ ವಿಧಿಯು ರಾಜ್ಯವು ಜನತೆಗೆ ಶಾಸನಾತ್ಮಕವಾಗಿ ಸಮಾಜಿಕ ನ್ಯಾಯವನ್ನು ಒದಗಿಸಬೇಕೆಂದು ತಿಳಿಸುತ್ತದೆ. ಸಂವಿಧಾನದ 46ನೇ ವಿಧಿಯು ದುರ್ಬಲ ವರ್ಗಗಳ ಶೈಕ್ಷಣಿಕ ಹಾಗು ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗಾಗಿ ಮತ್ತು ಅವುಗಳ ಆಭಿವೃದ್ಧಿಗಾಗಿ ರಾಜ್ಯವು ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಅಂದರೆ ಮೀಸಲಾತಿ, ವಿದಾರ್ಥಿ ವೇತನಗಳು, ಸಾಲಸೌಲಭ್ಯ, ಕೌಶಲ್ಯಾಭಿವೃದ್ದಿ ತರಬೇತಿ ಕಾರ್ಯಕ್ರಮಗಳ ಮೂಲಕ ದುರ್ಬಲ ವರ್ಗ ಮತ್ತು ಅಲ್ಪಸಂಖ್ಯಾತರ ಶ್ರೇಯಾಭಿವೃದ್ಧಿಯನ್ನು ಕೈಗೊಳ್ಳಬೇಕೆಂದು ತಿಳಿಸುತ್ತದೆ. 49ನೇ ವಿಧಿಯು ಭಾರತದ ಸಂಸ್ಕೃತಿಯ ಪ್ರತೀಕಗಳಾದ ಪುರಾತನ, ಐತಿಹಾಸಿಕ ಸ್ಮಾರಕ ಸ್ಥಳಗಳು ಮತ್ತು ವಸ್ತುಗಳಿಗೆ ರಕ್ಷಣೆಯನ್ನು ಒದಗಿಸಬೇಕೆಂದು ತಿಳಿಸುತ್ತದೆ. ಹಾಗಾಗಿ ಅಲ್ಪಸಂಖ್ಯಾತರು ಅವರ ಧಾರ್ಮಿಕ ಸ್ಥಳಗಳು ರಕ್ಷಣೆಗೆ ಅವಕಾಶ ಮಾಡಿಕೊಡುತ್ತದೆ. 51ನೇ ವಿಧಿಯು ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಿ ಭಾರತವು ಎಲ್ಲಾ ವಿಧವಾದ ಸಹಾಯ ಮತ್ತು ಸಹಕಾರವನ್ನು ನೀಡಬೇಕೆಂದು ತಿಳಿಸುತ್ತದೆ. ಹಾಗಾಗಿ ಅಂತರಾಷ್ಟ್ರೀಯ ಒಪ್ಪಂದಗಳು ಸಮಾಜದಲ್ಲಿ ವೈಯಕ್ತಿಕ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಏಕತೆಯಿಂದ ಬದುಕಲು ಅವಕಾಶವನ್ನು ಮಾಡಿಕೊಡುತ್ತದೆ.

ಸಂವಿಧಾನದ ಪ್ರಸ್ತಾವನೆ, ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳನ್ನು ಹೊರತುಪಡಿಸಿ ಅಲ್ಪಸಂಖ್ಯಾತರಿಗೆ ನೀಡಲಾಗಿರುವ ಸೌಲಭ್ಯ ಮತ್ತು ಸೌಕರ್ಯಗಳನ್ನು ಸಂವಿಧಾನದ ಕೆಲವೊಂದು ವಿಧಿಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿದೆ. ಸಂವಿಧಾನದ 347ನೇ ವಿಧಿಯು ಒಂದು ರಾಜ್ಯದ ಸಮುದಾಯದವರು ಮಾತನಾಡುವ ಭಾಷೆಗೆ ಸಂಬಂಧಪಟ್ಟ ವಿಶೇಷವಾದ ಉಪಬಂಧವನ್ನು ರಾಷ್ಟ್ರಪತಿಯವರಿಗೆ ರಚಿಸುವಂತಹ ವಿಧಿವತ್ತಾದ ಅಧಿಕಾರವನ್ನು ನೀಡುತ್ತದೆ.

350(ಎ) ವಿಧಿಯು ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಸೌಲಭ್ಯಗಳನ್ನು ನೀಡಿದ್ದು, 350(ಬಿ) ವಿಧಿಯು ಬಾಷಾ ಅಲ್ಪಸಂಖ್ಯತರಿಗಾಗಿ ವಿಶೇಷ ಅಧಿಕಾರಿಯನ್ನು ರಾಷ್ಟ್ರಪತಿಯವರು ನೇಮಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಈ ಮೂಲಕ ರಾಷ್ಟ್ರಪತಿಯವರಿಗೆ ವಿಶೇಷ ಅಧಿಕಾರಿಯು ಭಾಷಾ ಅಲ್ಪಸಂಖ್ಯಾತರ ಕುಂದುಕೊರತೆಗಳನ್ನು ಸೂಚಿಸಲು ಮತ್ತು ಸಂರಕ್ಷಣೆಗೆ ಕ್ರಮಗಳನ್ನು ಕೈಗೊಳ್ಳಲು ಸಂವಿಧಾನಾತ್ಮಕವಾಗಿ ಅವಕಾಶವನ್ನು ಮಾಡಿಕೊಡುತ್ತದೆ.

**ಉಪಸಂಹಾರ:**

ಒಟ್ಟಾರೆ ಹೇಳುವುದಾದರೆ ಭಾರತದ ಸಂವಿಧಾನ ಸರ್ವರ ಸಮಾನತೆಗಾಗಿ, ಹಿತಕ್ಕಾಗಿ ನೀಡಲಾಗಿರುವ ನಿಧಿ ಎಂಬುದಾಗಿ ಹೇಳಬಹುದಾಗಿದೆ. ಏಕೆಂದರೆ ಇಲ್ಲಿ ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ವಿವಿಧ ರೀತಿಯ ವಿಧಿಗಳು ಮತ್ತು ಸೌಕರ್ಯಗಳು ಮತ್ತು ಅವರ ಹಕ್ಕುಗಳ ಸಂರಕ್ಷಣಾ ಕ್ರಮಗಳು ಮತ್ತು ಸೌಲಭ್ಯಗಳನ್ನು ಇದು ಒಳಗೊಂಡಿದೆ. ಹಾಗಾಗಿ ಭಾರತದಂತಹ ವಿವಿಧ ಸಂಸ್ಕೃತಿ, ವಿವಿಧ ಜನಾಂಗ, ವಿವಿಧ ಧರ್ಮಗಳು, ವಿವಿಧ ಸಮುದಾಯದವರ, ವಿವಿಧ ವ್ಯಕ್ತಿತ್ವದವರ ವಿವಿಧ ರೀತಿಯ ಸಮಸ್ಯೆಗಳಿಗೆ ಪರಿಹಾರವನ್ನು ಸಂವಿದಾನದಲ್ಲಿ ನೀಡಲಾಗಿದೆ. ಹಾಗಾಗಿ ಭಾರತ ಸಂವಿಧಾನವು ಭಾರತದ

ಅಲ್ಪಸಂಖ್ಯಾತರ ಸಂರಕ್ಷಣೆಯಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ ಮತ್ತು ಹಕ್ಕುಗಳನ್ನು ರಕ್ಷಿಸುವಲ್ಲಿ ಭರವಸೆಯನ್ನು ನೀಡುವಂತಹ ಪ್ರಮುಖ ಮೂಲವಾಗಿದೆ ಎಂದು ಸ್ಪಷ್ಟೀಕರಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**


- Abdul Raheem P.Vijapu, Ajay Kumar Singh and Kumar Suresh. (1997). Minorities, National Integration, Problems and Prospects. South Asian Publishers, New Delhi.
- John Dayal. (2007). A Matter of Equality; Freedom of faith in Secular India Anamika Publishers, New Delhi.
- Louis Wirth. (1945). The Problem of minority Groups. In Ralph Linton (ed) The Science of man in the world crisis, Columbia University press, New York.
- Soli.J Sorabjee, "Minorities: National and international Protection in Iqbal A Ansari (ed), Readings on Minorities perspectives and documents. (Vol-1), Institute of Objective Study, New Delhi.
- William J Duiker. (2010). The Essential World History. Vol.01, USA: Central learning.


IIMRD JOURNALS